ಶ್ರೀ ಬಿ.ಬಿ. ಶಿವಪ್ಪ: ಸನ್ಮಾನ್ಯ ಅಧ್ಯಕ್ಷರೆ, ಅನಧಿಕೃತವಾದಂತಹ ಅಂಗಡಿಗಳು ಎಲ್ಲಾ ಕಡೆಗೆ ಇದ್ದಾವೆ. ಅವರ ಗಮನಕ್ಕೆ ಬಂದಿಲ್ಲ ಎಂದು ಹೇಳುತ್ತಾರೆ. ಎಲ್ಲಾ ಊರಿನಲ್ಲಿ ಎಲ್ಲಾ ಕ್ಷೇತ್ರದಲ್ಲೂ ಇದ್ದಾವೆ.

ಶ್ರೀ ಮಂಜುನಾಥ ಸಿ ಕುನ್ನೂರ್: ಬ್ಯಾಡಗಿ ತಾಲ್ಲೂಕಿನಲ್ಲಿ ಎರಡು ಅಂಗಡಿಗಳ ಮೇಲೆ ತಾವು ಕ್ರಮ ಕೈಗೊಂಡಿದ್ದು ಅದು ಬೇರೆ ಊರು. ಆದರೆ ಈಗ ನಿರ್ದಿಷ್ಟವಾಗಿ ಅರಬಗೊಂಡ ಎನ್ನತಕ್ಕ ಊರಿನಲ್ಲಿ ಸಾರ್ವಜನಿಕರು ಮಾಹಿತಿ ಕೊಟ್ಟಿದ್ದಾರೆ.

ಅಧ್ಯಕ್ಷರು: ಮಾನ್ಯ ಸಚಿವರು ಅದನ್ನೇ ಬಹಳ ಸ್ಪಷ್ಟವಾಗಿ ಹೇಳಿದರು. ನನ್ನ ಹತ್ತಿರ ಇರುವ ಮಾಹಿತಿ ಪ್ರಕಾರ ಅಲ್ಲಿ ಏನೂ ನಡೆದಿಲ್ಲವಾದು ಈಗ ಮಾನ್ಯ ಸದಸ್ಯರು ಹೇಳಿದ್ದಾರೆ. ಅದಕ್ಕೆ ತಕ್ಷಣ ವ್ಯವಸ್ಥೆ ಮಾಡಿಸುತ್ತೇನೆಂದು ಹೇಳಿದ್ದಾರೆ.

ಶ್ರೀ ಮಂಜುನಾಥ ಕುನ್ನೂರ್: ಅವರು ಅಧಿಕೃತ, ಅನಧಿಕೃತ ಲೈಸೆನ್ಸ್ ಬಗ್ಗೆ ಮಾತ್ರ ಹೇಳಿದ್ದಾರೆ. ಅರಬಗೊಂಡ ಎಂಬಲ್ಲಿ ಸಾರಾಯಿ ಘಟಕವೇ ಅನಧಿಕೃತವಾಗಿದೆ. ಆದನ್ನು ರೈಡ್ ಮಾಡಿಸಿ ಅದರ ಬಗ್ಗೆ ಕ್ರಮ ತೆಗೆದುಕೊಳ್ಳಬೇಕೆಂದು ಹೇಳುತ್ತೇನೆ.

ಪಂಪಿಂಗ್ ಸ್ಟೇಷನ್ನುಗಳಲ್ಲಿ ಲೋ ವೋಲ್ಟೇಜ್

146 (1056) ಶ್ರೀ ಡಿ.ಆರ್. ಪಾಟೀಲ್(ಗದಗ್) : ಮಾನ್ಯ ಇಂಧನ ರಾಜ್ಯ ಸಚಿವರುಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಡಂಬಳ, ಮುಂಡರಗಿ ಹಾಗೂ ಕೊರ್ಲ ಹಳ್ಳಿಯಲ್ಲಿರುವ ಪಂಪಿಂಗ್ ಸ್ಟೇಷನ್ನಿನಲ್ಲಿ ಸಾಕಷ್ಟು ವೋಲ್ಟೇಜ್ ಇಲ್ಲದಿದ್ದರಿಂದ ಗದಗ್ -ಬೆಟಗೇರಿ ನಗರಕ್ಕೆ ಪ್ರತಿನಿತ್ಯ ನೀರು ಸರಬರಾಜು ಮಾಡಲು ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಹಾಗಿದ್ದಲ್ಲಿ ಈ ತೊಂದರೆಗಳನ್ನು ನಿವಾರಿಸಲು ಸರ್ಕಾರದ ಕೈ ಗೊಳ್ಳಲಿರುವ ಕ್ರಮಗಳೇನು?

ಇ) ಲೋಡ್ ಮ್ಯಾನೇಜ್‌ಮೆಂಟ್ ಮಾಡುವಾಗ ಕುಡಿಯುವ ನೀರಿಗೆ ಪ್ರಥಮ ಆದ್ಯತೆ ಕೊಡಲು ಸಂಬಂಧಿಸಿದ ಅಧಿಕಾರಿಗಳಿಗೆ ಸೂಕ್ತ ಆದೇಶ ನೀಡಲಾಗುವುದೇ?

ಶ್ರೀ ಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು)

ಅ) ಹೌದು

ಆ) ಬೇಸಿಗೆಯ ಪ್ರಾರಂಭವಾಗಿರುವುದರಿಂದ ರಾಜ್ಯಾದ್ಯಂತ ವಿದ್ಯುತ್ ಬೇಡಿಕೆಯು ದಿನೇ ದಿನೇ ಹೆಚ್ಚುತ್ತಿದೆ. ಈ ಓವರ್ ಲೋಡ್ ಪರಿಸ್ಥಿತಿಯಿಂದಾಗಿ ಕಡಿಮೆ ವೋಲ್ಟೇಜ್ ಸಮಸ್ಯೆ ತಲೆದೋರಿದೆ. ಸಾಮಾನ್ಯವಾಗಿ ಫೆಬ್ರವರಿ ಮತ್ತು ಮಾರ್ಚ್ ತಿಂಗಳುಗಳಲ್ಲಿ ಸಮಸ್ಯೆಯು ಸ್ವಲ್ಪ ಹೆಚ್ಚಾಗಿರುತ್ತದೆ. ಏಪ್ರಿಲ್ 99 ರ ಮಧ್ಯಭಾಗದ ನಂತರ ನೀರಾವರಿ ಪಂಪುಸೆಟ್ಟುಗಳ ಬಳಕೆಯು ಗಣನೀಯವಾಗಿ ಇಳಿಮುಖಗೊಳ್ಳುವ ಸಾಧ್ಯತೆ ಇದ್ದು, ವೋಲ್ಟೇಜ್ ಗುಣಮಟ್ಟದಲ್ಲಿ ಸುಧಾರಣೆ ಉಂಟಾಗುತ್ತದೆ.

ಗದಗ ಮತ್ತು ಮುಂಡಗಿ ತಾಲ್ಲೂಕುಗಳಲ್ಲಿಯೂ ಸಹ ಮೇಲ್ಕಂಡ ಕಾರಣದಿಂದ ವೋಲ್ಟೇಜ್ ಪರಿಸ್ಥಿತಿ ಉಂಟಾಗಿರುತ್ತದೆ. ಆದರೆ ಗದಗ್-ಬೆಟಗೇರಿ ನಗರಕ್ಕೆ ನೀರು, ಸರಬ ರಾಜು ಮಾಡುತ್ತಿರುವ ಡಂಬಳ, ಮುಂಡರಗಿ ಹಾಗೂ ಕೊರ್ಲಹಳ್ಳಿಯಲ್ಲಿರುವ ಪಂಪಿಂಗ್‌ಗೆ ತೊಂದರೆ ಆಗದಂತೆ ಮಂಡಳಿಯು ಸಾಕಷ್ಟು ಎಚ್ಚರವಹಿಸುತ್ತಿದೆ. ಈ ಪಂಪಿಂಗ್ ಸ್ಟೇಷನ್ನನ್ನು ಕಾರ್ಯ ನಿರ್ವಹಿಸಲು ಬೇಕಾಗುವ ವೋಲ್ಟೇಜ್‌ನಲ್ಲಿ ವಿದ್ಯುತ್‌ಸರಬರಾಜನ್ನು ವ್ಯವಸ್ಥೆ ಮಾಡಲಾಗುತ್ತಿದೆ. ಗದಗ ಮತ್ತು ಮುಂಡಗಿ ತಾಲ್ಲೂಕುಗಳಲ್ಲಿ ವಿದ್ಯುತ್ ಸರಬರಾಜಿನ ಸುಧಾರಣೆಗಾಗಿ ಮತ್ತು ವೋಲ್ಟೇಜ್ ಗುಣಮಟ್ಟ ಸುಧಾರಣೆಗಾಗಿ ಮಂಡಳಿಯು ಗದಗದಲ್ಲಿ ಒಂದು 220 : 110 ಕೆ.ವಿ.ವಿದ್ಯುತ್ ಸ್ವೀಕರಣಾ ಕೇಂದ್ರವನ್ನು ಸುಮಾರು 17.7 ಕೋಟಿ ರೂ.ಗಳ ವೆಚ್ಚದಲ್ಲಿ ನಿರ್ಮಾಣ ಮಾಡುತ್ತಿದೆ. ನಿರ್ಮಾಣ ಕಾರ್ಯವನ್ನು ಸಮರೋಪಾದಿಯಲ್ಲಿ ನಿರ್ವಹಿಸಲಾಗುತ್ತಿದ್ದು, ಅತಿ ಶೀಘ್ರದಲ್ಲಿಯೇ ಈ ವಿದ್ಯುತ್ ಸ್ವೀಕರಣಾ ಕೇಂದ್ರವನ್ನು ಚಾಲನೆಗೊಳಿಸಲು ತೀವ್ರ ರೀತಿಯಲ್ಲಿ ಪ್ರಯತ್ನಗಳನ್ನು ಮಾಡಲಾಗುತ್ತಿದೆ. ಸದರೀ ವಿದ್ಯುತ್ ವ್ವೀಕರಣಾ ಕೇಂದ್ರ ಕಾರ್ಯಾರಂಭ ಮಾಡಿದ ನಂತರ ವಿದ್ಯುತ್ ಸರಬರಾಜಿನಲ್ಲಿ ಸಾಕಷ್ಟು ಸುಧಾರಣೆ ಉಂಟಾಗುತ್ತದೆ. ಅಲ್ಲದೇ ವೋಲ್ಟೇಜ್‌ಗುಣಮಟ್ಟದಲ್ಲಿಯೂ ಸಹ ಸುಧಾರಣೆ ಉಂಟಾಗುತ್ತದೆ. ಅಲ್ಲದೇ ಮುಂಡರಗಿಯಲ್ಲಿರುವ 33: 11 ಕೆ.ವಿ ವಿದ್ಯುತ್ ಸಬ್-ಸ್ಟೇಷನ್ನನ್ನು 110: 33 ಕೆ.ವಿ.ಗೆ ಸುಮಾರು 7.9 ಕೋಟಿ ರೂ.ವೆಚ್ಚದಲ್ಲಿ ಉನ್ನತೀಕರಿಸುವ ಕಾಮಗಾರಿಯನ್ನು ಸಹ ಕೈಗೆತ್ತಿಕೊಳ್ಳಲಾಗಿದೆ. ಸಿವಿಲ್ ಕಾಮಗಾರಿಗಳು ಪ್ರಗತಿಯಲ್ಲಿದೆ. ಈ ಕಾಮಗಾರಿಯು ಪೂರ್ಣಗೊಂಡ ನಂತರ ಮುಂಡರಗಿ ತಾಲ್ಲೂಕಿನಲ್ಲಿವಿದ್ಯುತ್ ಸರಬರಾಜಿನ ಪರಿಸ್ಥಿತಿಯಲ್ಲಿ ಇನ್ನೂ ಹೆಚ್ಚಿನ ಸುಧಾರಣೆ ಉಂಟಾಗುತ್ತದೆ.

ಇ) ಪ್ರಶ್ನೆಯ 'ಆ' ಭಾಗದ ಉತ್ತರದಲ್ಲಿ ತಿಳಿಸಿರುವಂತೆ ಗದಗ-ಬೆಟಗೇರಿ ಅವಳೀ ನಗರಗಳಿಗೆ ಕುಡಿಯುವ ನೀರು ಸರಬರಾಜು ಮಾಡುವ ಪಂಪಿಂಗ್ ಸ್ಟೇಷನ್ನುಗಳ ಕಾರ್ಯಾಚರಣೆಗೆ ತೊಂದರೆ ಆಗದಂತೆ ಮಂಡಳಿಯು ಸಾಕಷ್ಟು ಎಚ್ಚರವಹಿಸುತ್ತಿದೆ. ಮಂಡಳಿಯು ಕುಡಿಯುವ ನೀರಿನ ಸರಬರಾಜಿಗೆ ವಿದ್ಯುತ್ ಪೂರೈಕೆಯ ವಿಷಯದಲ್ಲಿ ಪ್ರಥಮ ಆದ್ಯತೆಯನ್ನು ನೀಡುತ್ತಿದೆ. ಮತ್ತು ತನ್ನ ಎಲ್ಲಾ ಕ್ಷೇತ್ರಾಧಿಕಾರಿಗಳಿಗೂ ಈ ಸಂಬಂಧ ಸೂಕ್ತ ರೀತಿಯಲ್ಲಿ ಆದೇಶವನ್ನು ಈಗಾಗಲೇ ನೀಡಿರುತ್ತದೆ.

ಶ್ರೀ ಡಿ.ಆರ್. ಪಾಟೀಲ್: ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರು ಕೊಟ್ಟ ಉತ್ತರದಲ್ಲಿ ಸಮಸ್ಯೆಯ ಅರಿವು ಸರ್ಕಾರಕ್ಕೆ ಇದೆ. ಅದಕ್ಕಾಗಿ ಕೆಲವು ಲಾಂಗ್ ಟರ್ಮ್ ಪ್ರೋಗ್ರಾಮ್ಸ್ ನಾವು ತೆಗೆದುಕೊಂಡಿದ್ದೇವೆಂದು ಹೇಳಿದ್ದಾರೆ. ಆದರೆ ಕೆಲವು ತ್ವರಿತ ಕ್ರಮವನ್ನು ಕೈಗೊಳ್ಳಬೇಕಾಗಿದೆ. 1 ಎಂವಿ ವೋಲ್ಟೇಜ್ ರೆಗ್ಯುಲೇಟರ್ಸ್-2 ಅಲ್ಲಿ ತ್ವರಿತವಾಗಿ ಬೇಕು ಎಂದು ಅಲ್ಲಿಯ ಅಧಿಕಾರಿಗಳು ಹೇಳುತ್ತಾರೆ. ಅದಕ್ಕೆ ಆ ಎರಡೂ ರೆಗ್ಯುಲೇಟರ್ಸ್‌ನ್ನು ನೀವು ಇಮ್ಮೀಡಿಯಟ್ ಆಗಿ ಗದಗಿಗೆ ಸಪ್ಲೈ ಮಾಡುವುದು ಒಂದು ವಿಚಾರ ಆಗಬೇಕು. ಆಮೇಲೆ ಕೊರ್ಲಹಳ್ಳಿಯಿಂದ ಡಂಬಳ್‌ವರೆಗೆ 11 ಕೆವಿಯ ಎಕ್ಸ್‌ಪ್ರೆಸ್ ಫೀಡರ್ ಲೈನ್ ಹಾಕಿಸಬೇಕು. ಈಗ ನೀವು ಒಂದು ಕ್ರಮ ಕೈ ಗೊಂಡರೆ ಮುಂದೆ ಮುಂಡರಗಿ ಸಬ್ ಸ್ಟೇಷನ್ ಆಸ್ತಿತ್ವಕ್ಕೆ ಬಂದಾಗ ಅನುಕೂಲ ಆಗುತ್ತದೆ. ಅದಕ್ಕಾಗಿ ಅದೊಂದು ಲಾಂಗ್ ರೇಂಜ್ ಪ್ರೋಗ್ರಾಮ್. ಆದನ್ನು ಇಮ್ಮೀಡಿಯಟ್ ಆಗಿ ಮಾಡಬೇಕು. ಇವೆರಡಕ್ಕಿಂತ ಬಹಳ ಅರ್ಜೆಂಟ್ ಅಂದರೆ ನಾಳೆ 25ನೇ ತಾರೀಖಿನಿಂದ ಆ ವಿದ್ಯುತ್ ಸ್ಥಾವರಗಳಿಗೆ ವಿದ್ಯುತ್ ಸರಬರಾಜನ್ನು ನಿಲ್ಲಿಸುತ್ತೇವೆಂದು ಹೇಳಿ ಕೆಇಬಿಯವರು ಒಂದು ಅಡ್ವರ್‌ಟೈಸ್‌ಮೆಂಟ್ ಕೊಟ್ಟಿದ್ದಾರೆ. ಸುಮಾರು ಆರು ಕೋಟಿ ರೂಪಾಯಿ

ಏನೋ ಬಾಕಿ ಇದೆ, ಮೈಸೂರಿನಲ್ಲಿ 52 ಕೋಟಿ ರೂಪಾಯಿ ಬಾಕಿ ಇದೆ. ಹುಬ್ಬಳ್ಳಿಯೊಳಗೆ 60 ಕೋಟಿ ರೂಪಾಯಿ ಬಾಕಿ ಇದೆ. ಬೆಳಗಾವಿಯಲ್ಲಿ 13 ಕೋಟಿ ರೂಪಾಯಿ ಬಾಕಿ ಇದೆ. ಅಲ್ಲೇನೂ ಮಾಡಿಲ್ಲ. ಆದರೆ ಗದಗಿನೊಳಗೆ ಆರು ಕೋಟಿ ರೂಪಾಯಿ ಬಾಕಿ ಇದೆ ಎಂದು ಹೇಳಿ ವಿದ್ಯುತ್ ಸರಬರಾಜನ್ನು ನಿಲ್ಲಿಸುತ್ತೇವೆಂದು ಎಂದು ಹೇಳಿದ್ದಾರೆ. ದಯವಿಟ್ಟು ಈ ವಿದ್ಯುತ್ ಸ್ಥಾವರಗಳಿಗೆ ಕೊಡತಕ್ಕಂಥ ವಿದ್ಯುತ್ ಸರಬರಾಜನ್ನು ಬಾಕಿ ಕೊಡುವುದರ ಸಲುವಾಗಿ ನಿಲ್ಲಿಸುವುದಿಲ್ಲ ಎನ್ನುವಂತಹ ಆದೇಶವನ್ನು ತಾವು ಕೊಡಬೇಕು. ಆಮೇಲೆ ಲೋಡ್ ಮ್ಯಾನೇಜ್‌ಮೆಂಟಿನೊಳಗೆ ಕುಡಿಯುವ ನೀರಿಗೆ ಪ್ರಥಮ ಆದ್ಯತೆಯನ್ನು ಕೊಟ್ಟು ಅಲ್ಲಿ ವೋಲ್ಟೇಜ್ ಮ್ಯಾನೇಜ್‌ಮೆಂಟ್ ಮಾಡುವ ಹಾಗೆ ಅಧಿಕಾರಿಗಳಿಗೆ ರೈಟಿಂಗ್‌ನಲ್ಲಿ ಆದೇಶವನ್ನು ಕೊಡಬೇಕು. ಬರೇ ಓರಲ್ ಆದೇಶವನ್ನು ಕೊಟ್ಟರೆ ಉಪಯೋಗ ಬೀಳುವುದಿಲ್ಲ. ಏಕೆಂದರೆ ಬೇರೆಯವರೂ ಬಂದು ಅಲ್ಲಿ ಕಿತಾಪತಿ ಮಾಡುತ್ತಿರುತ್ತಾರೆ. ಆದ್ದರಿಂದ ರೈಟಿಂಗ್‌ನೊಳಗೆ ತಾವು ಆದೇಶವನ್ನು ಕಳಿಸುವಂತಹ ವ್ಯವಸ್ಥೆ ತಾವು ಮಾಡಬೇಕು.

ಶ್ರೀ ಶರಣಬಸಪ್ಪ ದರ್ಶನಾಪುರ : ಮಾನ್ಯ ಸಭಾಧ್ಯಕ್ಷರೆ, ಮಾನ್ಯ ಸದಸ್ಯರು ಹೇಳಿದ ಹಾಗೆ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಹೋದ ವಾರ ನನ್ನ ಗಮನಕ್ಕೆ ತಂದಿದ್ದರು. ನಾನೇ ಖುದ್ದಾಗಿ ಅಲ್ಲಿರತಕ್ಕ ಎಕ್ಸಿಕ್ಯೂಟೀವ್ ಇಂಜೀನಿಯರ್ ಹತ್ತಿರ ಮಾತನಾಡಿ ಕುಡಿಯುವ ನೀರಿಗೆ ಹೆಚ್ಚಿನ ಆದ್ಯತೆ ಯನ್ನು ಕೊಡಬೇಕೆಂದು ಕೂಡ ಹೇಳಿದ್ದೇನೆ. ಮತ್ತು ಅಲ್ಲಿ ಈಗಾಗಲೇ ಇರತಕ್ಕ ವ್ಯವಸ್ಥೆಯಲ್ಲಿ ಒಳ್ಳೆಯ ರೀತಿಯ ವೋಲ್ಟೇಜ್ ಕೊಡಲಿಕ್ಕೆ ಈಗಾಗಲೇ ಕಾರ್ಯಕ್ರಮವನ್ನು ಕೂಡ ಹಾಕಿಕೊಂಡಿದ್ದೇವೆ. ತಾವೇನು ಈಗ ರೆಗ್ಯುಲೇಟರ್ಸ್ ಬಗ್ಗೆ ಹೇಳಿದ್ದೀರಿ. ಈಗಾಗಲೇ ನಮ್ಮಲ್ಲಿರತಕ್ಕ ಚೀಫ್ ಇಂಜೀನಿಯರ್ ಅವರ ಹತ್ತಿರ ಮಾತನಾಡಿ ಅವಶ್ಯಕತೆ ಇದ್ದರೆ ಆ ಮೆಟೀರಿಯಲ್ಸ್ ಕೂಡ ಕಳುಹಿಸಿಕೊಡುತ್ತೇನೆ. ಮತ್ತು ಇದಕ್ಕೆ ಸಂಪೂರ್ಣವಾಗಿ ಕುಡಿಯುವ ನೀರಿನ ವ್ಯವಸ್ಥೆಗೆ ಪರ್ಮನೆಂಟ್ ಆಗಿ ಸಲ್ಯೂಷನ್ ಆಗಬೇಕಾಗಿದೆ. ಈಗಾಗಲೇ ಗದಗ್‌ನಲ್ಲಿ ಒಂದು 220 ಕೆ.ವಿ ಸ್ಟೇಷನ್ ಬರತಕ್ಕ ತಿಂಗಳ ಕೊನೆಯ ಹಂತದಲ್ಲಿ ಮುಗಿಯತಕ್ಕ ಕೆಲಸ ಆಗುತ್ತಿದೆ. ಮತ್ತು ಮುಂಡರಗಿಯಲ್ಲಿಯೂ ಕೂಡ ಈಗಾಗಲೇ 110 ಕೆವಿ ಸ್ಟೇಷನ್ ಕೆಲಸ ಪ್ರಾರಂಭ ಮಾಡುತ್ತಿದ್ದೇವೆ. ಆ ಮುಂಡರಗಿ ಸ್ಟೇಷನ್ ಮುಗಿದ ತಕ್ಷಣ ಸಂಪೂರ್ಣವಾದಂತಹ ಕುಡಿಯುವ ನೀರಿನ ವ್ಯವಸ್ಥೆಗೆ ಯಾವುದೇ ರೀತಿಯ ತೊಂದರೆ ಇಲ್ಲದ ಹಾಗೆ ಗದಗ್ ಮತ್ತು ಬೆಟಗೇರಿ ಗ್ರಾಮದಲ್ಲಿ ಆಗುತ್ತದೆ. ಮತ್ತು ಮಾನ್ಯ ಸದಸ್ಯರು ಕುಡಿಯುವ ನೀರಿನ ವಿಚಾರದಲ್ಲಿ ಕೆಇಬಿ ಬಾಕಿ ಬಗ್ಗೆ ಹೇಳಿದ್ದಾರೆ. ತಾವು ಮುನಿಸಿಪಾಲಿಟಿಯ ವತಿಯಿಂದ ಆದಷ್ಟು ದುಡ್ಡನ್ನು ನಮ್ಮ ಕೆಇಬಿ ಇಲಾಖೆಗೆ ಕಳಿಸಿದರೆ ಹೆಚ್ಚಿನ ರೀತಿಯಲ್ಲಿ ಕೆಲಸಗಳನ್ನು ಅಲ್ಲಿ ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಮತ್ತು ಕುಡಿಯುವ ನೀರಿನ ವ್ಯವಸ್ಥೆಗೆ ನಾವು ಇಲ್ಲಿಯವರೆಗೆ ಯಾವುದೇ ರೀತಿಯ ಕಟ್ ಮಾಡಿಲ್ಲ. ಕುಡಿಯುವ ನೀರಿನ ವ್ಯವಸ್ಥೆಗೆ ಕಟ್ ಮಾಡದ ಹಾಗೆ ನಾವು ನೋಡಿಕೊಳ್ಳುತ್ತೇವೆ. ಆದರೂ ಕೂಡ ನಿಮ್ಮ ಮುನಿಸಿಪಾಲಿಟಿ ಕೆಲಸಗಳನ್ನು ನಾವು ತೆಗೆದುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ ಎಂಬ ವಿಚಾರವನ್ನು ಮಾನ್ಯ ಸಭಾಧ್ಯಕ್ಷರ ಮೂಲಕ ಅವರ ಗಮನಕ್ಕೆ ತರಲು ಇಚ್ಛೆ ಪಡುತ್ತೇನೆ.

ಶ್ರೀ ಡಿ. ಆರ್ ಪಾಟೀಲ್ : ಅಲ್ಲಿ ಹತ್ತು ದಿವಸ 12 ದಿವಸಕ್ಕೆ ಒಮ್ಮೆ ಕುಡಿಯುವ ನೀರನ್ನು ಕೊಡುತ್ತಾರೆ. ಜನರಿಗೆ ಹೆಚ್ಚಿನ ದುಡ್ಡನ್ನು ಕೊಡಬೇಕು ಎಂದು ನಾವು ಹೇಗೆ ಹೇಳಬೇಕು. ನೀವು ಪ್ರತಿ ನಿತ್ಯ ಕುಡಿಯುವ ನೀರನ್ನು ಗದಗಿನ ನಾಗರೀಕರಿಗೆ ಸಿಗುವಂತಹ ವ್ಯವಸ್ಥೆ ಮಾಡಿ. ಆಗ ಅವರಿಗೂ ಹೆಚ್ಚಿನ ದುಡ್ಡನ್ನು ಮುನಿಸಿಪಾಲಿಟಿಗೆ ಕೊಡಿ ಎಂದು ಹೇಳುವುದಕ್ಕೆ ನನಗೆ ಒಂದು ನೈತಿಕ ಶಕ್ತಿ ಬರುತ್ತದೆ. ದಯವಿಟ್ಟು ಪ್ರತಿನಿತ್ಯ ನೀರಿನ ವ್ಯವಸ್ಥೆ ಮಾಡಿ.

ಶ್ರೀ ಶರಣಬಸಪ್ಪ ದರ್ಶನಾಪುರ: ಕುಡಿಯುವ ನೀರಿನ ವ್ಯವಸ್ಥೆಗಾಗಿ ಸಾಕಷ್ಟು ಕಾರ್ಯಕ್ರಮಗಳನ್ನು ನಾವು ಹಾಕಿಕೊಂಡಿದ್ದೇವೆ. ಗದಗಿನಲ್ಲಿ 18 ಕೋಟಿ ರೂಪಾಯಿಗಳ ವೆಚ್ಚದಲ್ಲಿ ಹಾಕಿಕೊಂಡಿದ್ದೇವೆ ಹಾಗೂ ಮುಂಡರಗಿಯಲ್ಲಿ ಐದು ಕೋಟಿ ರೂಪಾಯಿ ವೆಚ್ಚದಲ್ಲಿ ಹಾಕಿಕೊಂಡಿದ್ದೇವೆ. ಮುಂಡರಗಿ ಸ್ಟೇಷನ್ ಮುಗಿದ ತಕ್ಷಣ ಸಂಪೂರ್ಣವಾಗಿ ಕುಡಿಯುವ ನೀರಿನ ವ್ಯವಸ್ಥೆಗೆ ಯಾವುದೇ ರೀತಿಯ ತೊಂದರೆ ಆಗುವುದಿಲ್ಲ. ಬರತಕ್ಕ ಡಿಸೆಂಬರ್ ಒಳಗಡೆ ಆ ಕೆಲಸ ಮುಗಿಸಬೇಕೆಂಬ ಕಾರ್ಯಕ್ರಮ ಕೂಡ ನಾವು ಹಾಕಿಕೊಂಡಿದ್ದೇವೆ. ಆದಾದ ತಕ್ಷಣ ಸಮಸ್ಯೆಗಳನ್ನೆಲ್ಲಾ ಬಗೆಹರಿಸ ಬಹುದೆಂದು ತಮಗೆ ಹೇಳುತ್ತಿದ್ದೇನೆ.

ಶ್ರೀ ಡಿ.ಆರ್. ಪಾಟೀಲ್: ಇದರ ಜೊತೆಗೆ ಕೊರ್ಲಹಳ್ಳಿಯಿಂದ ಡಂಬಳ್‌ವರೆಗೆ ಎಕ್ಸ್‌ಪ್ರೆಸ್ ಫೀಡರ್‌ಲೈನ್ ಹಾಕುವುದರ ಬಗ್ಗೆ ನೀವು ಈಗಿನಿಂದಲೇ ಆಕ್ಷನ್ ಇನಿಷಿಯೇಟ್ ಮಾಡಿದರೆ ಅನುಕೂಲ ಆಗುತ್ತದೆ.

ಶ್ರೀ ಶರಣಬಸಪ್ಪ ದರ್ಶನಾಪುರ : ಏನೇನು ಕಾರ್ಯಕ್ರಮಗಳನ್ನು ಹಾಕಿ ಕೊಳ್ಳಬೇಕೋ ಅವೆಲ್ಲವನ್ನೂ ಹಾಕಿಕೊಳ್ಳುತ್ತೇವೆ. ಆದರ ಬಗ್ಗೆ ಬೇರೆ ಅಭಿಪ್ರಾಯ ಇಲ್ಲ.

ಶ್ರೀ ಡಿ.ಆರ್. ಪಾಟೀಲ್ : ಈ ಎಕ್ಸ್‌ಪ್ರೆಸ್ ಫೀಡರ್ ಲೈನ್ ಬಗ್ಗೆ ಇಲ್ಲ.

ಶ್ರೀ ಶರಣಬಸಪ್ಪ ದರ್ಶನಾಪುರ: ಅದರ ಬಗ್ಗೆ ಸರ್ಕಾರದ ಗಮನಕ್ಕೆ ತಾವು ತಂದಿದ್ದೀರಿ. ಹೋದವರ್ಷ ಶೂನ್ಯವೇಳೆಯಲ್ಲಿ ಕೂಡ ಅದರ ವಿಚಾರ ಪ್ರಸ್ತಾಪಕ್ಕೆ ಬಂದಿತ್ತು. ನಾವು ಈಗಾಗಲೇ ಎಲ್ಲಾ ಅಧಿಕಾರಿಗಳ ಜೊತೆ ಮಾತನಾಡಿದ್ದೇವೆ. ಕುಡಿಯುವ ನೀರಿನ ಬಗ್ಗೆ ಏನೇನು ಕಾರ್ಯಕ್ರಮಗಳನ್ನು ನಾವು ಏನೇನು ಕಾರ್ಯಕ್ರಮಗಳನ್ನು ಹಾಕಿಕೊಳ್ಳಬೇಕು, ಆದರ ಬಗ್ಗೆ ಕಾರ್ಯಕ್ರಮ ಈಗಾಗಲೇ ಹಾಕಿಕೊಂಡಿದ್ದೇವೆ. ಅದು ಇಂಪ್ಲಿಮೆಂಟ್ ಆಗಬೇಕಾದರೆ ಒಂದು ತಿಂಗಳು ಆಹಬಹುದು. ಆ ಕೆಲಸವನ್ನು ಮಾಡಿಸಿಕೊಟ್ಟು ಆ ಗದಗ್‌ನಲ್ಲಿರತಕ್ಕ ಜನರಿಗೆ ಕುಡಿಯುವ ನೀರಿನ ವ್ಯವಸ್ಥೆಯಲ್ಲಿ ತೊಂದರೆ ಆಗದ ಹಾಗೆ ನಾವು ಸರ್ಕಾರದವರು ನೋಡಿಕೊಳ್ಳುತ್ತೇವೆ ಎಂದು ತಮಗೆ ಆಶ್ವಾಸನೆ ಕೊಡುತ್ತೇನೆ.

ಶ್ರೀ ಎನ್. ರಾಜಣ್ಣ : ನನ್ನ ಪ್ರಶ್ನೆಗೆ ಉತ್ತರವನ್ನು ಯಾವಾಗ ಕೊಡುತ್ತೀರಿ.

ಪ್ರಶ್ನೆ ಸಂಖ್ಯೆ : 1080.

ಅಧ್ಯಕ್ಷರು : ಎರಡು ದಿವಸ ಟೈಮ್ ತೆಗೆದುಕೊಂಡಿದ್ದಾರೆ.

ಶ್ರೀಎನ್. ರಾಜಣ್ಣ: ತಮಗೋ ಪೇಪರ್ ಕಟಿಂಗ್ ಏಕೆ ಕಳಸಿದ್ದೇನೆಂದರೆ ಅಲಸೂರು ಕರೆಯ ಸುತ್ತಲೂ ಇರತಕ್ಕ ಜನರು ಈಗಾಗಲೇ ಜಾಂಡೀಸ್, ಲೀವರ್ ಪ್ರಾಬ್ಲಮ್‌ನಿಂದ ಸಫರ್ ಆಗುತ್ತಿದ್ದಾರೆ. ಹಣ ಯಾವ ತರಹ ಖರ್ಚಾಗುತ್ತಿದೆ.

ಅಧ್ಯಕ್ಷರು : ನಾನು ಎಲ್ಲಾ ವಿಚಾರವನ್ನು ಓದಿದ್ದೇನೆ. ಎರಡು ದಿವಸ ಕಾಲಾವಕಾಶ ಕೊಡಿ.

ರಾಯಚೂರಿನಲ್ಲಿ ಅಪರಾಧಗಳು

147 (369) ಶ್ರೀ ಮತಿ ಬಿ.ಟಿ.ಲಲಿತಾ ನಾಯಕ್ (ದೇವದುರ್ಗ) : ಮಾನ್ಯ ಗೃಹ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?